ಕೊಟ್ಟಿದ್ದಾರೆ. ಅವರು ಹಾಗೆ ಕಳುಹಿಸಿದ ಮೇಲೆ, ಅವರನ್ನು ಮನೆಗೆ ಹೋಗಿ ಎಂದು ಹೇಳುವುದಕ್ಕಾಗುವುದಿಲ್ಲ. ಯಾವ್ಯಾವುದಕ್ಕೆ ಅವರನ್ನು ರಿಕ್ರೂಟ್ ಮಾಡಿದ್ದಾರೋ, ಆ ಪೋಸ್ಟು ಗಳನ್ನು ಕೊಡಬೇಕಾದದ್ದು ಅವಶ್ಯಕ. ಒಂದು ಇರಾಖೆಗೆ ಪೋಸ್ಟಿಂಗ್ಸ್ ಆದಾಗ ಅಲ್ಲಿರುವ ಲೋಕರ್ ಕ್ಯಾಂಡಿಡೇಟ್ಸ್ ರಿಟ್ರೆಂಚ್ ಆಗುತ್ತಾರೆ. ಇಂತಹ ಒಂದು ಪರಿಸ್ಥಿತಿ ಉದ್ಭವವಾಗಿರುವು ದರಿಂದ ಲೋಕರ್ ಕ್ಯಾಂಡಿಡೇಟ್ಸ್‌ಗೆ ಇದರಲ್ಲಿ ಯಾವ ರೀತಿ ಸಹಾನುಭೂತಿಯಿಂದ ಸಹಾಯ ಮಾಡಬೇಕೆಂಬುದನ್ನು ಪರಿಶೀಲನೆಯಾಗುತ್ತದೆ. ಅನೇಕ ಕಾನೂನಿನ ಅಡೆತಡೆಗಳು ಇವೆ. ಅದನ್ನು ಪರಿಶೀಲಿಸಿ ಇದರಲ್ಲಿ ಒಂದು ಸಮಾಧಾನಕರವಾದ ಪರಿಹಾರವನ್ನು ಹುಡುಕುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ, ತಾವು ಮತ್ತು ತಮ್ಮ ಸರ್ಕಾರದವರು ಸಮಾಜವಾದ ತತ್ವಕ್ಕೆ ಬದ್ಧರಾಗಿದ್ದೀರೆಂದು ಡಿಕ್ಲೇರ್ ಮಾಡಿದ್ದೀರಿ. ಈಗ ಸಮಾಜವಾದಕ್ಕೆ ಕಟ್ಟು ಬಿದ್ದಂತಹ ನೀವು ಒಂದು ಸಾರಿ 3 ಸಾವಿರ ಜನ, ಒಂದು ಸಾರಿ 5 ಸಾವಿರ ಜನ ಹೀಗೆ ಲೋಕರ್ ಕ್ಯಾಂಡಿಡೇಟ್ ಗಳನ್ನು ಕೆಲಸದಿಂದ ತೆಗೆದು ಹಾಕಿದ್ದೀರಿ, ಈ ರೀತಿ ನೀವು ಅವರನ್ನು ಕೆಲಸದಿಂದ ತೆಗೆದು ಹಾಕಿದರೆ ಮುದುಪೆ ಆಗಿ ಮಕ್ಕಳಾಗಿರುವವರ ಗತಿ ಏನು ? ಅವರು ಮನೆ ಬಾಡಿಗೆ ಎಲ್ಲಿಂದ ತಂದು ಕೊಡಬೇಕು, ಹಾಲಿನವರಿಗೆ ಎಲ್ಲಿಂದ ತಂದು ಕೊಡಬೇಕು, ಅಂಗಡಿಯಲ್ಲಿ ಸಾಲ ಮಾಡಿ ಅಕ್ಕಿ ಬೇಳೆ ತಂದಿರುತ್ತಾರೆ ಅವರಿಗೆ ಅವರು ಎಲ್ಲಿಂದ ದುಡ್ಡು ತಂದು ಕೊಡಬೇಕು, ಅವರನ್ನು ಕೆಲಸದಿಂದ ತೆಗೆಯುವುದಕ್ಕೆ ಆ ನೌಕರರಿಗೆ ಮುನ್ನೆಚ್ಚರಿಕೆ ಕೊಟ್ಟಿದ್ದೀರಾ ? ಈಗ ಕೆಲಸದಿಂದ ರಿಟ್ರೆಂಚ್ ಮಾಡಿರುವವರಿಗೆ ಮತ್ತು ಹೊಸದಾಗಿ ಸ್ಕೂಲು ಕಾರೇಜುಗಳಿಂದ ಓದಿ ಹೊರಗೆ ಬರುವವರಿಗೆ ಕೆಲಸವನ್ನು ಕೊಡಿಸುವುದಕ್ಕೆ ಏನು ಏರ್ಪಾಡು ಮಾಡಿದ್ದೀರಿ, ಅವರಿಗೆಲ್ಲರಿಗೂ ಮತ್ತು ಎಲ್ಲಾ ನಿರುದ್ಯೋಗಿಗಳಿಗೂ ಕೆಲಸವನ್ನು ಒದಗಿಸುವ ಬಗ್ಗೆ ಒಂದು ಬ್ಲೂ ಪ್ರಿಂಟ್ ತಯಾರು ಮಾಡಲು ಒಂದು ಕಮಿಟಿಯನ್ನು ನೇಮಿಸಿದರೆ ಅವರಿಗೆ ಕೆಲಸವನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸಿ ಎಷ್ಟು ಜನಗಳಿಗೆ ಕೆಲಸವನ್ನು ಒದಗಿಸಬೇಕೆಂಬುದನ್ನು ತಾವು ತಿಳಿದು ಕೊಂಡಿದ್ದೀರಾ ? ಆದ್ದರಿಂದ ಅವರಿಗೆ ಕೆಲಸ ಒದಗಿಸುವುದಕ್ಕೆ ಬ್ಲೂ ಪ್ರಿಂಟ್ ತಯಾರು ಮಾಡುವುದಕ್ಕೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸ್ವಾಮಿ, ಈ ಲೋಕರ್ ಕ್ಯಾಂಡಿಡೇಟ್ಸ್ ವಿಷಯದಲ್ಲಿ ಸರ್ಕಾರದವರು ಸಹಾನುಭೂತಿಯಿಂದ ಯೋಚನೆ ಮಾಡಬೇಕು. ಒಂದುವೇಳೆ ಲೋಕಲ್ ಕ್ಯಾಂಡಿಡೇಟ್‌ಗಳನ್ನು ಕಂಟಿನ್ಯೂ ಮಾಡುವುದರಿಂದ ಎಲ್ಲಾದರೂ ಸರ್‌ಪ್ಲಸ್ ಆಗುತ್ತದೆ ಎಂದು ಕಂಡುಬಂದರೆ ಅಲ್ಲಿ ಕಾನೂನಿನ ಅಡ್ಡಿ ಆತಂಕಗಳು ಇದ್ದರೂ ಸಹ ಅದನ್ನು ಪರಿಶೀಲನೆ ಮಾಡಲಾಗುತ್ತದೆಂದು ತಾವು ಹೇಳಿದ್ದೀರಾ ? ಹಿಂದೆ 1961ನೇ ಇಸವಿಯಲ್ಲಿ ಇದೇರೀತಿ ಆದಾಗ ಸರ್ಕಾರದವರು ಒಂದು ಭರವಸೆಯನ್ನು ಕೊಟ್ಟು ಆಗ ಇದ್ದಂತಹ ಲೋಕರ್ ಕ್ಯಾಂಡಿಡೇಟ್‌ಗಳನ್ನು ರೆಗ್ಯುಲರೈಜ್ ಮಾಡಿದ್ದಾರೆ. ಆದರೆ ಈಗ ಇರತಕ್ಕಂಥ ಲೋಕರ್ ಕ್ಯಾಂಡಿಡೇಟ್‌ಗಳನ್ನು ಸರ್ಕಾರದವರು ರೆಗ್ಯುಲರೈಜ್ ಮಾಡಿಲ್ಲ. ಇದೇ ರೀತಿ ಅವರನ್ನು ಮುಂದುವರಿಸಿಕೊಂಡು ಬಂದರೆ ನಂತರ ಕಾನೂನಿನ ಅಡ್ಡಿ ಆತಂಕಗಳು ಬರುತ್ತವೆ ಎಂದು ಸ್ವಲ್ಪ ಜನರನ್ನು ರೆಗ್ಯುಲರೈಜ್ ಮಾಡಿದರು ಈಗ ಮತ್ತೆ ಬಹಳ ಜನಗಳನ್ನು ಕೆಲಸದಿಂದ ತೆಗೆದು ಬೀದಿಪಾಲು ಮಾಡಿದ್ದಾರೆ. ಈಗ ಹೇಳುತ್ತಾರೆ. ಯೋಚನೆ ಮಾಡುತ್ತೇವೆ ಎಂದು. ಈ ಸಂದರ್ಭದಲ್ಲಿ ನಾನ್ ಗೆಜಿಟೆಡ್ ನೌಕರರ ಅಸೋಸಿಯೇಷನ್ನಿನವರು ಈ ಲೋಕರ್ ಕ್ಯಾಂಡಿಡೇಟ್‌ಗಳ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಸೂಚಿಸಿ ಅವರನ್ನು ಅಡ್ವಾರ್ಬ್ ಮಾಡುವುದಕ್ಕೆ ತಮಗೆ ಮೆಮೋರಾಂಡಂ ಸಲ್ಲಿಸಿಲ್ಲವೇ ? ಆ ಬಗ್ಗೆ ಅವರು ತಮ್ಮ ಜೊತೆಯಲ್ಲಿ ಚರ್ಚೆ ಮಾಡಿಲ್ಲವೇ ? ಲೋಕರ್ ಕ್ಯಾಂಡಿಡೇಟ್‌ಗಳಿಗೆ ಸರಿಯಾದಂತಹ ಪರಿಹಾರವನ್ನು ದೊರಕಿಸುವುದಾಗಿ ತಾವು ಸ್ಪಷ್ಟವಾಗಿ ಹೇಳಿಲ್ಲವೇ, ಆ ರೀತಿ ತಾವು ಹೇಳಿದ್ದರೂ ಸಹ ಅವರಿಗೆ ಸರಿಯಾದ ಕೆಲಸಗಳನ್ನು ಕೊಡದೆ ಅವರನ್ನು ಕಷ್ಟದಲ್ಲಿ ಇಡುವುದಕ್ಕೆ ಕಾರಣವೇನು ?

ಶ್ರೀ ವಾಟಾಳ್ ನಾಗೆರಾಜ್ (ಚಿಕ್ಕಪೇಟೆ).—ಸ್ವಾಮಿ, ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂ ಮಾಡಬೇಕೆಂದು ಅನೇಕರು ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಈಗ ತಾವು 632 ಜನ ಲೋಕರ್ ಕ್ಯಾಂಡಿಡೇಟ್‌ಗಳನ್ನು ಏನು ಕೆಲಸದಿಂದ ತೆಗೆದುಹಾಕಿದ್ದೀರಿ ಅವರಲ್ಲಿ ಮದುವೆಯಾಗಿರುವವರು ಇದ್ದಾರೆ, ಬಡವರು ಇದ್ದಾರೆ. ಮದುವೆಯಾಗಿ ಮಕ್ಕಳಾಗಿರುವವರು ಇದ್ದಾರೆ. ಇಂಥವರನ್ನು ತಾವು ಕೆಲಸದಿಂದ ತೆಗೆದುಹಾಕಿದ್ದೀರಲ್ಲಾ ಅವರ ಗತಿ ಏನು ? ಅವರ ಹೆಂಡತಿ ಮಕ್ಕಳು ಯಾವರೀತಿ ಜೀವನ ಮಾಡಬೇಕು ? ಅವರಲ್ಲಿ ಕೆಲವರಿಗೆ 5 ವರ್ಷ ಸರ್ವೀಸಾಗಿದೆ,

ಕೆಲವರಿಗೆ 8 ವರ್ಷ ಸರ್ವೀಸ್ ಆಗಿದೆ, ಕೆಲವರಿಗೆ 3 ವರ್ಷ ಸರ್ವೀಸ್ ಆಗಿದೆ. ಅಂಥವರನ್ನೆಲ್ಲಾ ಕೆಲಸದಿಂದ ತೆಗೆದು ಹಾಕಿದ್ದೀರಲ್ಲಾ ಅವರ ಗತಿ ಏನು? ಅವರಿಗೆ ತಾವು ಕೂಡಲೇ ಕೆಲಸವನ್ನು ಕೊಡದಿದ್ದರೆ ಅವರು ಜೀವನ ಮಾಡುವ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ತಾವು ಈ ಲೋಕಲ್ ಕ್ಯಾಂಡಿಡೇಟ್ ಒಂದು ಪಟ್ಟಿಯ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರಿಗೆ ಕೊಟ್ಟು ಇವರೆಲ್ಲರಿಗೂ ಕೆಲಸವನ್ನು ಕೊಡುವವರೆಗೂ ಬೇರೆ ಯಾರಿಗೂ ಕೆಲಸವನ್ನು ಕೊಡಬೇಡಿ ಎಂದು ಅವರಿಗೆ ನಿರ್ದೇಶನ ಕೊಡುತ್ತೀರಾ?

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಸ್ವಾಮಿ, ಸರ್ಕಾರದವರು ಕೊಟ್ಟಂತಹ ಅಂಕಿ ಅಂಶಗಳ ಪ್ರಕಾರ 3 ಸಾವಿರ ಜನ ಲೋಕಲ್ ಕ್ಯಾಂಡಿಡೇಟ್‌ಗಳು ಇದ್ದಾರೆಂದು ಗೊತ್ತಾಗಿದೆ. ಇದರಲ್ಲಿ ಪುನಃ 468 ಜನಗಳಿಗೆ ಕೆಲಸವನ್ನು ಕೊಟ್ಟಿದ್ದೇವೆ ಎಂದು ತಾವು ಹೇಳಿದ್ದೀರಿ, ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಒಂದು ಅಂಶ ಸ್ಪಷ್ಟವಾಗಿ ಕಾಣುತ್ತದೆ. ಸರ್ಕಾರ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಯಾವ ಗೊತ್ತು ಗುರಿ ಇಲ್ಲದೆ ತಮಗೆ ಬೇಕಾದ ಅಭ್ಯರ್ಥಿಗಳನ್ನು ಕೆಲಸಕ್ಕೆ ತೆಗೆದುಕೊಂಡು ತಮಗೆ ಬೇಡವಾದವರನ್ನು ಮನೆಗೆ ಕಳುಹಿಸಿರತಕ್ಕ ಪರಿಸ್ಥಿತಿ ನಮಗೆ ಗೊತ್ತಾಗುತ್ತದೆ. ತಾವು ಮೂರುಸಾವಿರ ಜನ ಲೋಕಲ್ ಕ್ಯಾಂಡಿಡೇಟ್‌ಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾದರೆ ಯಾವ ಅಂದಾಜು ಇಲ್ಲದೆ ಹೇಗೆ ಮೂರು ಸಾವಿರ ಜನರನ್ನು ಕೆಲಸಕ್ಕೆ ತೆಗೆದುಕೊಂಡಿರಿ? ಈಗ ತಾವು 1966-67ನೇ ಸಾಲಿನ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ವರದಿಯನ್ನು ನಾಲ್ಕು ವರ್ಷಗಳು ಕಳೆದ ಮೇಲೆ ಈ ಸಭೆಯ ಮುಂದೆ ಚರ್ಚೆಗೆ ಇಟ್ಟಿದ್ದೀರಿ. ಈ ವರದಿಯ 34ನೇ ಪುಟದಲ್ಲಿ ಹೇಳುತ್ತಾರೆ, ಅನೇಕ ಇಲಾಖೆಗಳಲ್ಲಿ ಸುಮಾರು 20 ವರ್ಷಗಳಿಂದ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ಸ್ಕೀಮ್ ಜಾರಿಯಲ್ಲಿಲ್ಲ, ಯಾವ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲದೆ ಲೋಕಲ್ ಕ್ಯಾಂಡಿಡೇಟ್‌ಗಳನ್ನು ಕೆಲಸಕ್ಕೆ ತೆಗೆದುಕೊಂಡು ಸರ್ಕಾರದವರು ಕೆಲಸವನ್ನು ನಡೆಸಿದ್ದಾರೆ ಎಂದು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ತಮ್ಮ ವರದಿಯಲ್ಲಿ ಹೇಳಿದ್ದಾರೆ, ಈ ರೀತಿ ತಾವು 3 ಸಾವಿರ ಜನ ಸ್ಥಳೀಯ ಅಭ್ಯರ್ಥಿಗಳನ್ನು ತೆಗೆದುಕೊಂಡು ಅವರಿಗೆ ಯಾವ ವಿಧವಾದ ಕೆಲಸದ ಭರವಸೆಯೂ ಇಲ್ಲದೆ ಸರ್ಕಾರ ಕೆಲಸವನ್ನು ನಿರ್ವಹಣೆ ಮಾಡಿದರೆ ಅವರಿಗೆ ಕೆಲಸದಲ್ಲಿ ಯಾವರೀತಿಯ ಹುಮ್ಮಸ್ಸು ಇರುತ್ತದೆ ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಆದ್ದರಿಂದ ಆ ಮೂರು ಸಾವಿರ ಜನಗಳನ್ನು ಏನು ಮಾಡಬೇಕೆಂದು ತಾವು ನಿರ್ಧಾರ ಮಾಡಿದ್ದೀರಿ? ಮತ್ತು ಯಾವ ಆಧಾರದ ಮೇರೆ ತಾವು 3 ಸಾವಿರ ಜನ ಅಭ್ಯರ್ಥಿಗಳನ್ನು ಕೆಲಸಕ್ಕೆ ತೆಗೆದುಕೊಂಡಿರಿ ಎಂದು ನಾನು ಸ್ಪಷ್ಟವಾಗಿ ಕೇಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು-ಕೋಟೆ).—ಸ್ವಾಮಿ, ತಾವು 1968ನೇ ಇಸವಿಯಲ್ಲಿ 15 ಸಾವಿರ ಅಭ್ಯರ್ಥಿಗಳಿಂದ ಅಪ್ಲಿಕೇಷನ್‌ಗಳನ್ನು ತೆಗೆದುಕೊಂಡು ಅವರಿಂದ 10, 15, 25 ರೂಪಾಯಿಗಳ ಫೀಜನ್ನು ತೆಗೆದುಕೊಂಡು ಅವರಿಗೆ ಪರೀಕ್ಷೆ ಮಾಡಿದ್ದೀರಿ. ಅದರಲ್ಲಿ ಲೋಕಲ್ ಕ್ಯಾಂಡಿಡೇಟ್ಸ್ ಎಷ್ಟು ಜನ ಇದ್ದಾರೆ? ಅವರನ್ನು ಕೆಲಸಕ್ಕೆ ತೆಗೆದುಕೊಳ್ಳದಿರುವುದಕ್ಕೆ ಕಾರಣ ವೇನು? ಅವರು ಪರೀಕ್ಷೆ ರಿಜಲ್ಟ್ ಏನಾಯಿತು? ಅದನ್ನು ಅನೌನ್ಸ್ ಮಾಡಿದ್ದೀರಾ? ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಿಂದ ಲಿಸ್ಟನ್ನು ತರಿಸಿಕೊಂಡು ಖಾಲಿ ಇದ್ದ ವೇಕೆನ್ಸಿಗಳನ್ನು ಫಿಲಪ್ ಮಾಡುವಾಗ 8 ವರ್ಷಗಳಿಂದ ಲೋಕಲ್ ಕ್ಯಾಂಡಿಡೇಟ್‌ಗಳಾಗಿ ಕೆಲಸಮಾಡುತ್ತಿರುವವರನ್ನು ಬಿಟ್ಟು ಹೊಸದಾಗಿ ಬೇರೆಯವರನ್ನು ನೇಮಕ ಮಾಡುತ್ತಿರುವುದು ಸರಿಯೇ? 8 ವರ್ಷಗಳಿಂದ ಲೋಕಲ್ ಕ್ಯಾಂಡಿಡೇಟ್‌ಗಳಾಗಿ ಕಲಸ ಮಾಡುತ್ತಿರುವವರನ್ನು ಕೆಲಸದಿಂದ ತೆಗೆದುಹಾಕಿ ಅವರನ್ನು ಮನೆಗೆ ಹೋಗಿ ಎಂದು ಹೇಳುವುದು ಸರಿಯೇ! ಮೊದಲು ಲೋಕಲ್ ಕ್ಯಾಂಡಿಡೇಟ್‌ಗಳಿಗೆ ಕೆಲಸವನ್ನು ಕೊಡುವುದಕ್ಕೆ ಪ್ರಿಫರೆನ್ಸ್ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ಮತ್ತು ಪರೀಕ್ಷೆ ನಡೆಸಿದವರ ರಿಜಿರ್ಲ್ಟ್‌ಅನ್ನು ಏತಕ್ಕೆ ಅನೌನ್ಸ್ ಮಾಡಲಿಲ್ಲ!

3-30 P. M.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಸರ್ಕಾರದವರು ಈ ಸ್ಥಳೀಯ ಅಭ್ಯರ್ಥಿಗಳ ಗೋಳನ್ನು ಮಾನವೀಯ ದೃಷ್ಟಿಯಿಂದ ನೋಡಬೇಕು. ಇವತ್ತು ಅನೇಕ ಜನ ಕೆಲಸ ಕಳೆದುಕೊಂಡಿದ್ದಾರೆ. ಇಂತಹವರು ಶಾಸಕರನ್ನು ಮತ್ತು ಮಂತ್ರಿಗಳನ್ನು ಪ್ರತಿನಿತ್ಯ ಬಂದು ಭೇಟಿ ಮಾಡಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದಾರೆ. ಇವರಲ್ಲಿ ಒಂದು ವರ್ಷದಿಂದ 6 ವರ್ಷಗಳವರೆಗೆ ಸರ್ವೀಸ್ ಮಾಡಿ ಕೆಲಸ ಕಳೆದುಕೊಂಡವರು ಇದ್ದಾರೆ. ಕೆಲವರಿಗೆ ಮದುವೆಯಾಗಿ ಮಕ್ಕಳು ಕೂಡ ಇವೆ. ಮತ್ತೆ ಕೆಲವರಿಗೆ ಬೇರೆ ಕಡೆ ಕೆಲಸಕ್ಕೆ ಸೇರಲು ಏಜ್ ಬಾರ್ ಆಗಿದೆ. ಇಂತಹವರ ಗೋಳನ್ನು ನೋಡುವುದಕ್ಕಾಗುತ್ತಿಲ್ಲ. ಆದ್ದರಿಂದ ಇನ್ನು ಒಂದು ವರ್ಷದವರೆಗೆ ಪಬ್ಲಿಕ್ ಸರ್ವೀಸ್ ಕಮಿಷನ್

(ಶ್ರೀ ಎಸ್. ಬಂಗಾರಪ್ಪ)

ಅವರು ಏನು ಸೆಲೆಕ್ಟ್ ಮಾಡಿ ನೇಮಕ ಮಾಡುತ್ತಿದ್ದಾರೆ ಅದನ್ನು ನಿಲ್ಲಿಸಿ, ಅಲ್ಲಿಯವರೆಗೆ ಈಗ ಕೆಲಸ ಕಳೆದುಕೊಂಡಿರುವವರಿಗೆ ಕೆಲಸ ಒದಗಿಸಬೇಕು ಮತ್ತು ಮುಂದೆ ಯಾರನ್ನೂ ತಾತ್ಕಾಲಿಕವಾಗಿ ಕೆಲಸಕ್ಕೆ ನೇಮಕ ಮಾಡಿಕೊಳ್ಳಬಾರದೆಂದು ಸರ್ಕಾರದವರು ಎಲ್ಲ ಇಲಾಖೆ ಅಧಿಕಾರಿಗಳಿಗೂ ಕೂಡ ತಿಳಿಸಬೇಕು. ಈಗ ಕೆಲಸ ಕಳೆದುಕೊಂಡಿರುವವರನ್ನು ಕೆಲಸಕ್ಕೆ ನೇಮಕ ಮಾಡಿ ಅವರನ್ನು ಕಾಯಂ ಮಾಡುವವರೆಗೂ ಕೂಡ ಮತ್ತೆ ಹೊಸಬರನ್ನು ಯಾರನ್ನೂ ಕೂಡ ಕೆಲಸಕ್ಕೆ ತಗೆದುಕೊಳ್ಳದಂತೆ ಸರ್ಕಾರದವರು ನೋಡಿಕೊಳ್ಳಬೇಕು. ಇದುವರೆಗೆ ಸರ್ಕಾರಿ ಸೇವೆಯನ್ನು ಮಾಡಿದಂತಹವರನ್ನು ಕೆಲಸದಿಂದ ತೆಗೆಯುವುದು ಮಾನವೀಯತೆ ದೃಷ್ಟಿಯಿಂದ ಒಳ್ಳೆಯದಲ್ಲ. ಈ ಒಂದು ದೃಷ್ಟಿಯನ್ನು ಸರ್ಕಾರದವರು ಇಟ್ಟುಕೊಂಡು ಹಿಂದೆ ಅವರು ಎಷ್ಟೋ ವರ್ಷ ಸರ್ವಿಸ್ ಮಾಡಿರಲಿ, ಅವರನ್ನೆಲ್ಲಾ ಕಾಯಂ ಮಾಡುವ ಯೋಚನೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈ ತರಹದ ಸಂದರ್ಭ ಸರ್ಕಾರದ ಮುಂದೆ ಹಿಂದೆ ಕೂಡ ಬಂದಿತ್ತು 1964-65ರಲ್ಲಿ ಸಾವಿರಾರು ಜನ ಸ್ಥಳೀಯ ಅಭ್ಯರ್ಥಿಗಳನ್ನು ಕೆಲಸದಿಂದ ತೆಗೆಯಬೇಕೆಂಬ ಪ್ರಶ್ನೆ ಬಂದಾಗ ಸರ್ಕಾರದವರು ಜನರಲ್ ಆಗಿ ಒಂದು ತೀರ್ಮಾನ ತೆಗೆದುಕೊಂಡು ಅವರನ್ನೆಲ್ಲಾ ಕಾಯಂ ಮಾಡಿದ್ದು ನನ್ನ ಜ್ಞಾಪಕದಲ್ಲಿದೆ. ಅದು ಮುಖ್ಯ ಮಂತ್ರಿಗಳಿಗೂ ಕೂಡ ಗೊತ್ತಿರಬಹುದು. ಹಿಂದೆ 1964ರವರೆಗೆ ಕೆಲಸದಲ್ಲಿದ್ದಂತಹ 6-7 ಸಾವಿರ ಸ್ಥಳೀಯ ಅಭ್ಯರ್ಥಿಗಳನ್ನು ಮಾನವೀಯ ದೃಷ್ಟಿ ಇಟ್ಟುಕೊಂಡು ಕಾಯಂ ಮಾಡಬೇಕೆಂದು ಕ್ಯಾಬಿನೆಟ್‌ನಲ್ಲಿ ಆಲೋಚನೆ ಮಾಡಿ ಒಂದು ಜನರಲ್ ಆರ್ಡರ್ ಹೊರಡಿಸಲಾಗಿತ್ತು. ಮತ್ತು ಇನ್ನು ಮುಂದೆ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ಕೆಲಸಕ್ಕೆ ತೆಗೆದುಕೊಳ್ಳಬಾರದೆಂದು ಸಹ ತೀರ್ಮಾನ ಕೈಕೊಳ್ಳಲಾಗಿತ್ತು. ಆದರೂ ಕೂಡ ಈಗ ಮುಖ್ಯಮಂತ್ರಿಗಳು ಹೇಳಿದಂತೆ ಇದುವರೆಗೆ 3 ಸಾವಿರ ಸ್ಥಳೀಯ ಅಭ್ಯರ್ಥಿಗಳನ್ನು ಕೆಲಸಕ್ಕೆ ತೆಗಿದುಕೊಳ್ಳಲಾಗಿದೆ. ಇಷ್ಟೊಂದು ಜನರನ್ನು ಏತಕ್ಕೆ ಕೆಲಸಕ್ಕೆ ನೇಮಕ ಮಾಡಿಕೊಳ್ಳಬೇಕಾಗಿತ್ತು, ಪಿ.ಎಸ್.ಸಿ. ಯಿಂದ ಕಾಯಂ ಆಗಿ ನೇಮಕ ಮಾಡಿಕೊಳ್ಳುವುದಕ್ಕಾಗುತ್ತಿರಲಿಲ್ಲವೇ ಎಂಬ ಪ್ರಶ್ನೆಗೆ ಈಗ ನಾನು ಹೋಗುವುದಿಲ್ಲ. ಈಗ ಏನು 3 ಸಾವಿರ ಜನ ಸ್ಥಳೀಯ ಅಭ್ಯರ್ಥಿಗಳಿದ್ದಾರೆ, ಅವರು ಒಂದರಿಂದ 5 ವರ್ಷದವರೆಗೆ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇವರನ್ನು ಕಾಯಂ ಮಾಡುವ ಬಗ್ಗೆ ರೂಲ್ಸ್ ಅಂಡ್ ರೆಗ್ಯುಲೇಷನ್ ಏನಿದೆ ಎಂಬುದನ್ನು ನೋಡಬೇಕಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಅವರ ಅವಗಾಹನೆಗೆ ಒಂದು ವಿಷಯ ತರುವುದೇನೆಂದರೆ, ಕಾನೂನಿನ ದೃಷ್ಟಿಯಿಂದ ಇವರನ್ನು ಕಾಯಂ ಮಾಡುವುದನ್ನು ವಿಚಾರ ಮಾಡದೆ, ಹಿಂದೆ ಇಂತಹ ಪರಿಸ್ಥಿತಿ ಬಂದಾಗ ಮಂತ್ರಿಮಂಡಲದವರು ಜನರಲ್ ಆಗಿ ಸ್ಥಳೀಯ ಅಭ್ಯರ್ಥಿಗಳನ್ನೆಲ್ಲಾ ಕಾಯಂ ಮಾಡಬೇಕೆಂದು ಏನು ಒಂದು ತೀರ್ಮಾನ ಕೈಕೊಂಡರೋ ಅದೇ ರೀತಿಯಲ್ಲಿ ಈಗಲೂ ಕೂಡ ತೀರ್ಮಾನ ಕೈಕೊಳ್ಳುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ಕಾನೂನಿನ ದೃಷ್ಟಿಯಿಂದ ಇದನ್ನು ವಿಚಾರ ಮಾಡುವುದಾದರೆ, ಒಂಬತ್ತು ತಿಂಗಳಿಗಿಂತ ಹೆಚ್ಚುಕಾಲ ಕೆಲಸ ಮಾಡಿದವರನ್ನೆಲ್ಲಾ ಕಾಯಂ ಮಾಡಬೇಕಾಗುತ್ತದೆ. ಒಂದು ಕಾರ್ಖಾನೆಯಲ್ಲಿ ಒಂಬತ್ತು ತಿಂಗಳಿಗಿಂತ ಜಾಸ್ತಿ ಕೆಲಸ ಮಾಡಿದ್ದರೆ ಅಂತಹವರನ್ನು ಕೂಡ ಕಾಯಂ ಮಾಡಬೇಕೆಂದು ಲೇಬರ್ ಕ್ಲಾಸ್‌ನಲ್ಲಿ ಹೇಳಿರುವುದು ನನ್ನ ಜ್ಞಾಪಕದಲ್ಲಿದೆ. ಸ್ಥಳೀಯ ಅಭ್ಯರ್ಥಿಗಳನ್ನು 9 ತಿಂಗಳಿಗಿಂತ ಹೆಚ್ಚು ಕಾಲ ಮುಂದುವರೆಸುವುದಕ್ಕೆ ಕಾನೂನು ಪ್ರಕಾರ ಅವಕಾಶವಿಲ್ಲ. ಅಂಥಾದರಲ್ಲಿ ಕೆಲವರು ಈಗ 5 ವರ್ಷದವರೆಗೂ ಕೂಡ ಸರ್ವಿಸ್ ಮಾಡಿದ್ದಾರೆ. ಅಂದಮೇಲೆ ಕಾನೂನು ಪ್ರಕಾರ ಇವರನ್ನು ಯಾವರೀತಿ ಕೆಲಸದಿಂದ ತೆಗೆಯುತ್ತೀರಿ ? ತೆಗೆದರೆ ಅದು ಕಾನೂನು ಬಾಹಿರವಾಗುತ್ತದೆ. ಈಗ ಎಷ್ಟೋ ಜನರನ್ನು ಕೆಲಸದಿಂದ ತೆಗೆಯಲಾಗಿದೆ. ಅವರ ಗೋಳನ್ನು ನೋಡುವುದಕ್ಕಾಗುತ್ತಿಲ್ಲ. ಇದನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರದವರು ಒಂದು ದಿಟ್ಟ ತೀರ್ಮಾನ ತೆಗೆದುಕೊಂಡು ಸ್ಥಳೀಯ ಅಭ್ಯರ್ಥಿಗಳನ್ನೆಲ್ಲಾ ಕಾಯಂ ಮಾಡುವುದು ಸೂಕ್ತ ಎಂದು ಸಲಹೆ ಮಾಡುತ್ತೇನೆ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು.

SRI AZIZ SAIT.—Sir, I want to add one more thing to what the hon. Member Sri Devaraj Urs has said. We know that several local candidates have been taken in both class III and class II including doctors and after retaining them in service for 9 months their services have been terminated. Government being a model employer should not have done this. Recently Government appointed 450 doctors through

Public Service Commission. When the Public Service Commission made the selection, doctors who were serving as local candidates were not selected. The same thing happened in the case of Junior Engineers also. The same thing is happening in the case of Class III also. Therefore, Government should now take a decision not to make any mere local appointments and also to see that until all the local candidates now retrenched are provided employment, no new recruitment is made. If there is any emergency in any department, that department should draw hands from other departments to tide over the emergency and not make any local appointments. ಇವತ್ತು ಸಾವಿರಾರು ಜನ ಸ್ಥಳೀಯ ಅಭ್ಯರ್ಥಿಗಳು ಕೆಲಸವನ್ನು ಕಳೆದುಕೊಂಡಿದ್ದಾರೆ. ಇಂತಹವರಿಗೆ ಮೊದಲು ಕೆಲಸ ಕೊಡಬೇಕು. ರೋಕೋಪಯೋಗಿ ಇಲಾಖೆಯಲ್ಲಿ ಸಾವಿರಾರು ಜನ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ, ಅಂತಹವರನ್ನು ಕಾಯಂ ಮಾಡಬೇಕು. ಈ ಬಗ್ಗೆ ಒಂದು ಕಮಿಟಿ ನೇಮಕ ಮಾಡುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಕೆ. ಪ್ರಭಾಕರ (ವತರ್ೂರು).—ಸ್ವಾಮಿ, ಈಗ ಸ್ಥಳೀಯ ಅಭ್ಯರ್ಥಿಗಳನ್ನು ಕಾಯಂ ಮಾಡುವ ಬಗ್ಗೆ ಸರ್ಕಾರಕ್ಕೆ ಇರುವ ತೊಡಕು ಏನು ಎಂಬುದು ಗೊತ್ತಾಗಿದೆ. ಇವತ್ತು ಕೆಲಸ ಕಳೆದುಕೊಂಡಂತಹವರು ಸತ್ಯಾಗ್ರಹ ಮಾಡುವ ಮೂಲಕ ಮುಖ್ಯಮಂತ್ರಿಗಳ ಗಮನವನ್ನು ಸೆಳೆದಿದ್ದಾರೆ. ಇವರನ್ನು ಕಾಯಂ ಮಾಡುವುದರಿಂದ ಯಾವ ಯಾವ ಜಾತಿಯವರಿಗೆ ಎಷ್ಟೆಷ್ಟು ದಾಮಾಷದ ಪ್ರಕಾರ ಕೆಲಸ ಸಿಗಬೇಕೋ ಅದು ಸಿಗುವುದು ಕಷ್ಟವಾಗುತ್ತದೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಕೆಲವು ಕಡೆಗಳಲ್ಲಿ ಕೆಲಸಗಳಿಗೆ ಭರ್ತಿ ಮಾಡುವಾಗ ಕೆಲವರನ್ನು ಬೇರೆ ಇಲಾಖೆಗಳಿಂದ ಕರೆಸಿಕೊಂಡಿರುತ್ತಾರೆ. ಇಲ್ಲಿನ ಕೆಲಸಗಳು ಮುಗಿದ ನಂತರ ಅವರ ಇಲಾಖೆಗಳಿಗೆ ವಾಪಸು ಕಳುಹಿಸುತ್ತಾರೆ. ಇದರಲ್ಲಿ ಡೈರೆಕ್ಟ್ ಅಪಾಯಿಂಟುಮೆಂಟ್ಸ್ ಎಂದು ಏನಿದಯೋ ಅದರಲ್ಲಿ ಕೇಂದ್ರ ಸರಕಾರ ಕೊಟ್ಟಿರುವ ಪರ್ಸಂಟೇಜಿನಂತೆ ಷೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ಷೆಡ್ಯೂಲ್ಡ್ ಟ್ರೈಬ್ಸ್ ಜನಾಂಗದ ಅಭ್ಯರ್ಥಿಗಳಿಗೆ ಮೊದಲು ಅವಕಾಶ ಮಾಡಿಕೊಡಬೇಕು. ಅನಂತರ ಇತರ ಅಭ್ಯರ್ಥಿಗಳನ್ನು ನೇಮಿಸಲು ಅವಕಾಶ ಮಾಡುವ ವ್ಯವಸ್ಥೆ ಮಾಡಬೇಕು. ಈಗ ಇದ್ದ ಹಾಗೇ ಇದ್ದರೆ ಸರಕಾರ ಮುಂದೆ ಇದರಿಂದ ತೊಂದರೆಗೆ ಸಿಕ್ಕಬೇಕಾಗಬಹುದು. ಇದು ಬಹಳ ಸೂಕ್ಷ್ಮವಾದ ವಿಚಾರ. ಈ ದೃಷ್ಟಿಯಿಂದ ಕೆಲಸಗಳಿಗೆ ತೆಗೆದುಕೊಳ್ಳುವಾಗ ಸರಕಾರದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್, ಷೆಡ್ಯೂಲ್ಡ್ ಟ್ರೈಬ್ಸ್ ಪರ್ಸಂಟೇಜು ಏನು ಕೊಡಬೇಕೆಂದು ಹೇಳಿರುತ್ತಾರೋ ಅದನ್ನು ಪೂರ್ತಿಯಾಗಿ ಕೊಡುತ್ತಿಲ್ಲ. ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸಗಳಿಗೆ ಅಭ್ಯರ್ಥಿಗಳನ್ನು ತೆಗೆದುಕೊಳ್ಳುವಾಗ ಮೀನಲು ಸ್ಥಾನಗಳಿಗೆ ನೇಮಿಸುವಾಗ, ಅಭ್ಯರ್ಥಿಗಳು ಇಲ್ಲದೇ ಇದ್ದರೆ ಅವರು ಬರುವವರೆಗೆ ನೇಮಕಗಳನ್ನು ಮಾಡಬಹುದು. ಅವರೆ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಪಂಗಡದ ಅಭ್ಯರ್ಥಿಗಳು ಬಂದ ಕೂಡಲೇ ಅವರನ್ನು ಮೊದಲು ನೇಮಕ ಮಾಡಬೇಕು. ಇಂತಹ ಒಂದು ನಿರ್ದಿಷ್ಟವಾದ ಪಾಲಿಸಿಯನ್ನು ಸರಕಾರ ಅನುಸರಿಸಿ ಡೈರೆಕ್ಟ್ ಅಪಾಯಿಂಟುಮೆಂಟುಗಳನ್ನು ಮಾಡುವಾಗ ಕೊಡಬೇಕಾದ ಪರ್ಸಂಟೇಜನ್ನೂ ನಿಗದಿ ಮಾಡಿ ಈ ಜನಾಂಗದವರಿಗೆ ಕೊಡಬೇಕು. ಇದನ್ನು ಮುಂದೆ ರೀ ಕ್ಲಾಸಿಫೈ ಮಾಡುವಾಗ ಷೆಡ್ಯೂಲ್ಡ್ ವರ್ಗದವರಿಗೆ ಯಾವ ಅನ್ಯಾಯಗಳೂ ಆಗದಂತೆ ಎರ್ಲಾ ಸಲಕರ್ಯಗಳನ್ನೂ ಕೊಡಬೇಕು. ಇಂತಹ ಒಂದು ನೀತಿ ಸರಕಾರ ಅನುಸರಿಸಬೇಕೆಂದು ಇಲ್ಲಿ ಸೂಚನೆ ಕೊಡುತ್ತೇನೆ.

†ಶ್ರೀ ನದಾತಿವಪ್ಪಪಾಟೀಲ್.—ಸ್ವಾಮಿ, ರೋಕಲ್ ಕ್ಯಾಂಡಿಡೇಟ್ಸುಗಳನ್ನು ನೇಮಕ ಮಾಡುವಾಗ ಸರಕಾರದಲ್ಲಿ ಹೆಚ್ಚಿನ ಕೆಲಸಗಳು ಎಲ್ಲ ಇಲಾಖೆಯಲ್ಲಿತ್ತು ಎಂದು ಹೇಳಿ ಅವರನ್ನು ತೆಗೆದು ಕೊಂಡಿರುವುದು ಬರೀ ಊಹೆಯ ಮೇಲೆ. ಕೆಲವು ವೇಳೆ ಇವರನ್ನು ಕೆಲಸದಿಂದ ಟರ್ಮಿನೇಟು ಮಾಡಿದ ಬಳಿಕ ಇನ್ನೂ ಕೆಲವರನ್ನು ಹಾಗೇ ಉಳಿಸಿರಬೇಕು ಎಂದು ನನ್ನ ಊಹೆ. ನಮ್ಮಾರು ಮೂರು ಸಾವಿರ ರೋಕಲ್ ಕ್ಯಾಂಡಿಡೇಟ್ಸುರುಗಳನ್ನು ಟರ್ಮಿನೇಟು ಮಾಡಿ ಇವರ ಜಾಗಗಳಿಗೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಚುನಾಯಿಸಿರುವ ಅಭ್ಯರ್ಥಿಗಳನ್ನು ನೇಮಕ ಮಾಡಬೇಕೆಂದು ಈಚೆಗೆ ಮಾಡುತ್ತಿದ್ದಾರೆಂದು ಕಾಣುತ್ತದೆ. ಈಚೆಗೆ ವಿದೇಜು ಅಕೌಂಟೆಂಟರುಗಳನ್ನು ನೇಮಕ ಮಾಡುವಾಗ ಇಂತಹ ರೋಕಲ್ ಕ್ಯಾಂಡಿಡೇಟರುಗಳನ್ನು ನೇಮಕ ಮಾಡಲಾಗುವುದು ಎಂದೂ ಹೇಳಿದ್ದರು. ಹಾಗೆ ಇಲ್ಲಿಯವರೆಗೂ ಸರಿಯಾದ ಪ್ರಯತ್ನ ಮಾಡಲಿಲ್ಲ. ಮೊನ್ನೆ ಮೊನ್ನೆ ಎಲ್ಲ ಕಡೆಗಳಲ್ಲೂ ಡೆಪ್ಯುಟಿ ಕಮಿಷನರ್‌ರವರು ವಿದೇಜು ಅಕೌಂಟೆಂಟರುಗಳ ನೇಮಕಮಾಡಲು ಇಂಟರ್ವ್ಯೂ ಮಾಡಿದ್ದಾರೆ. ನಮ್ಮ ರಾಯಚೂರಿನಲ್ಲಿ ಸರಿಯಾಗಿ ಮಾಡಲಿಲ್ಲ, ಎಂದು

(ಶ್ರೀ ನದಾಶಿವಪ್ಪ ಪಾಟೀಲ್)

ಬಂದಾಗ, ಇದರ ಬಗ್ಗೆ ಸ್ವೇ ಆರ್ಡರು ಕೂಡ ಆಗಿದೆ. ಹೀಗಾದರೆ ಅಲ್ಲಿ ನೇಮಕಮಾಡಿದವರ ಪರಿಸ್ಥಿತಿ ಏನಾಗಬೇಕು! ಇವರನ್ನು ಕೂಡಲೇ ಕೆಲಸದಿಂದ ತೆಗೆದುಹಾಕಿದರೆ ಮುಂದೆ ಇವರ ಗತಿ ಯೇನು? ಇದರ ಬಗ್ಗೆ ಸರಕಾರ ವಿಚಾರಮಾಡಿ ಇಲ್ಲಿ ಒಂದು ಸರಿಯಾದ ಆಶ್ವಾಸನೆ ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಚಂಪಾಬಾಯಿ ಭೋಗಲೇ (ಕಾಗೇವಾಡ).—ಸ್ವಾಮಿ, ರೋಕಲ್ ಕ್ಯಾಂಡಿಡೇಟರು ಗಳನ್ನು ತುಂಬುವ ಕಾಲಕ್ಕೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಐವತ್ತು ಪರ್ಸೆಂಟಿನಷ್ಟು ಜಾಗ ಗಳಿಗೆ ಷೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ಟ್ರೈಬ್ಸ್ ಪಂಗಡಗಳಿಂದ ಬಂದಿರುವವರನ್ನು ನೇಮಕ ಮಾಡ ಬೇಕೆಂದು ಹೇಳುತ್ತಿದ್ದರೂ ಇದುವರೆಗೂ ಆ ಕಮಿಷನ್ನಿನವರು ಸರಿಯಾಗಿ ಆಯ್ಕೆ ಮಾಡುತ್ತಿಲ್ಲ. ನರ್ಸ್ ನಟರ್‌ಮೆಂಟು ಇರಾಖೆ, ಎಕ್ಸೈಜು ಇರಾಖೆ ಇವುಗಳಲ್ಲಿ ಈ ರೀತಿಯಾಗಿದೆ. ಸರಕಾರ ಒಂದು ಕಂಡಿಷನ್ ಹಾಕಿ ಷೆಡ್ಯೂರ್ಡ್ ಕ್ಯಾಸ್ಟ್ ಪಂಗಡದವರಿಗೆ ಶೇಕಡಾ 40 ರಷ್ಟು ಸ್ಥಾನಗಳನ್ನು ಮೀಸರಾಗಿಡಬೇಕು ಎಂದು ಸೂಚನೆ ಕೊಡಬೇಕು. ಮೊನ್ನೆ ನಡೆದ ಇಂಟರ್‌ವ್ಯೂನಲ್ಲಿ ಕೂಡ ರೋಕಲ್ ಕ್ಯಾಂಡಿಡೇಟರುಗಳನ್ನು ಇಂಟರ್‌ವ್ಯೂ ಮಾಡಿದಾಗ ಸರಿಯಾದ ರೀತಿ ಮಾಡದೆ ಇರುವುದ ರಿಂದಾಗಿ ಈಚೆಗೆ ಪಬ್ಲಿಕ್ ಸರ್ವಿಸ್ ಕಮಿಷನ್ ಜನ ಬಂದರು ಎಂದು ಇವರನ್ನು ತೆಗೆದುಹಾಕು ತ್ತಿದ್ದಾರೆ. ಇದರ ಕಡೆಗೆ ಸರಕಾರ ಲಕ್ಷ ಕೊಡಬೇಕೆಂದು ಹೇಳುತ್ತೇನೆ.

ಶ್ರೀಮತಿ ಕೆ. ಲೀಲಾವತಿ ರೈ (ಬಂಟವಾಳ).—ಸ್ವಾಮಿ, ತಾಲ್ಲೂಕು ಬೋರ್ಡುಗಳಿಗೆ ನೇಮಕ ಗಳನ್ನು ಮಾಡುವಾಗ ಪಿ. ಎಸ್. ಸಿ. ಯವರು ಪಟ್ಟಿಯನ್ನು ಕಳುಹಿಸಿಕೊಡುತ್ತಾರೆ ಮತ್ತು ಅಲ್ಲಿ ರೋಕಲ್ ಕ್ಯಾಂಡಿಡೇಟ್ಸ್‌ಗೆ ಸರಿಯಾಗಿ ಅವಕಾಶ ಕೊಡುತ್ತಿಲ್ಲ. ಈಚೆಗೆ ಕದಕ್ಷಿಣ ನಡ ಜಿಲ್ಲೆಯಲ್ಲಿ ಎರೇಜು ಆಕೌಂಟೆಂಟರುಗಳನ್ನು ನೇಮಕ ಮಾಡುವಾಗ ಇಲ್ಲಿ 140 ಪೋಸ್ಟುಗಳಿದ್ದವು. ಇದಕ್ಕೆ 1,500 ಜನ ಬಂದಿದ್ದರು. ಇದರಲ್ಲಿ ರೋಕಲ್ ಕ್ಯಾಂಡಿಡೇಟುಗಳು ತಮಗೆ ಸರಿಯಾಗಿ ಇಂಟರ್‌ವ್ಯೂ ಮಾಡಿಲ್ಲ ಎಂದು ಈಚೆಗೆ ಸರಕಾರದಿಂದ ಸ್ವೇ ಕೂಡ ತಂದಿದ್ದಾರೆ. ಇದನ್ನು ಪಿ. ಎಸ್. ಸಿ. ಯವರು ಸರಿಯಾಗಿ ಕನ್‌ಸಿದರ್ ಮಾಡಬೇಕೆಂದು ಸರಕಾರದಲ್ಲಿ ಏನಂತಿ ಮಾತಿಕೊಳ್ಳುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರುಗಳು ಅನೇಕ ಸಲಹೆಗಳನ್ನು ಮಾಡಿದ್ದಾರೆ. ಯಾವ ಯಾವ ಸಲಹೆಗಳೇ ಆಗಲೀ ಕಾರ್ಯರೂಪಕ್ಕೆ ತರಬೇಕಾಗಿ ದ್ದರೆ, ಕ್ರಮಬದ್ಧವಾಗಿರಬೇಕಾದರೆ ಅದು ಕಾಯ್ದೆಯ ಅನುಸಾರವಾಗಿರಬೇಕು. ಕೆಲವು ಸಲಹೆಗಳನ್ನು ಕಾರ್ಯಗತ ಮಾಡಲು ಸಾಧ್ಯವಾಗುವುದಿಲ್ಲ. ಕಾನೂನು ಬಾಹಿರವಾಗುವುದರಿಂದ ಮುಂದೆ ಅವು ಕೋರ್ಟುಗಳಲ್ಲೂ ನಿಲ್ಲುವುದಿಲ್ಲ. ಇವೆಲ್ಲಾ ಪ್ರಸಂಗಗಳನ್ನೂ ಪರಿತೀಲನೆ ಮಾಡುತ್ತಿ ದ್ದೇವೆ. ಇಷ್ಟರಲ್ಲೇ ನಿರ್ಣಯ ತೆಗೆದುಕೊಳ್ಳಬೇಕು ಎಂದು ಎಲ್ಲಾ ಪ್ರಯತ್ನಗಳನ್ನೂ ನಾವು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಿಗೆ ಹೇಳಬೇಕಾದರೆ 1956 ರಿಂದ 1965 ರ ವರೆಗೆ ಎರಡು ಸಲ ಇಂತಹ ರೋಕಲ್ ಕ್ಯಾಂಡಿಡೇಟ್ರರುಗಳನ್ನು ರೆಗ್ಯುಲರೈಸು ಮಾಡಿದ್ದಾರೆ. ಇದಕ್ಕೆ ಆಗ ಕಾರಣ ಹಿಂದೆ ಯೂನಿಫಾರಂ ರೆಕ್ರೂಟುಮೆಂಟು ರೂಲ್ಸು ಇರಲಿಲ್ಲ ಮತ್ತು ಆಗ ಇಂತಹ ರೂಲ್ಸು ಮಾಡಲೂ ಸಾಧ್ಯವಾಗಲಿಲ್ಲ. ರೆಕ್ರೂಟುಮೆಂಟು ರೂಲ್ಸುಗಳನ್ನು ಮಾಡಿದ ಮೇಲೆ ಕೆಲವು ಕೇಸುಗಳು ಕೋರ್ಟಿಗೆ ಹೋಗಿ ರಿಕ್ರೂಟ್‌ಮೆಂಟ್ ರೂಲ್ಸುಗಳು ಕ್ವಾಷ್ ಆದವು. ಇಂತಹ ಒಂದು ಪರಿಸ್ಥಿತಿ ಯಲ್ಲಿ ಕೆಲವಗಳಿಗೆ ತೊಂದರೆಯಾಗಿ ಅಲ್ಲಲ್ಲಿ ರೋಕಲ್ ಕ್ಯಾಂಡಿಡೇಟರುಗಳನ್ನು ನೇಮಿಸುವ ಪರಿ ಸ್ಥಿತಿ ಬಂತು. ಇಂತಹ ಒಂದು ಕಷ್ಟವಾದ ಪರಿಸ್ಥಿತಿ ಬಂತು. ಆದರೆ 1965 ರಲ್ಲಿ ಎಷ್ಟು ಜನ ರೋಕರ್ ಕ್ಯಾಂಡಿಡೇಟ್ಸ್ ತೆಗೆದುಕೊಂಡಿದ್ದರೋ ಅವರನ್ನೆಲ್ಲಾ ರೆಗ್ಯುಲರೈಸು ಮಾಡಿಯಾಯಿತು. ಮತ್ತು ಇದಕ್ಕಾಗಿ ರೂಲ್ಸುಗಳನ್ನು ಮಾಡಿ ಸರಿಪಡಿಸಲಾಯಿತು. ಹೀಗೆ ರೆಗ್ಯುಲರೈಸು ಮಾಡ ಲಾಗದ ಪರಿಸ್ಥಿತಿ ಬಂದಿರುವುದು 1965 ರಿಂದ ಈಚೆಗೆ ನೇಮಕ ಮಾಡಿರುವುದರ ಬಗ್ಗೆ. ಈಗಿನ ಪರಿಸ್ಥಿತಿ ಏನಾಗಿದೆ ಎಂದರೆ ಯೂನಿಫಾರಂ ರೆಕ್ರೂಟುಮೆಂಟು ರೂಲ್ಸುಗಳಾಗಿರುವುದರಿಂದ ಪಿ. ಎಸ್. ಸಿ. ಯವರು ಅನೇಕ ಕಡೆ ರೆಕ್ರೂಟುಮೆಂಟು ಮಾಡಿ ಅಲ್ಲಲ್ಲಿ ಜನರನ್ನು ಕಳುಹಿಸುತ್ತಿದ್ದಾರೆ. ಯಾವಾಗ ಪಿ. ಎಸ್. ಸಿ. ಕಡೆಯಿಂದ ಜನ ರೆಕ್ರೂಟು ಆಗಿ ಬರುತ್ತಾರೋ ಅಂತಹ ಕಡೆಗಳಲ್ಲಿ ಇರುವ ರೋಕರ್ ಕ್ಯಾಂಡಿಡೇಟುಗಳನ್ನು ತೆಗೆಯಬೇಕಾಗುತ್ತದೆ. ಇದರಿಂದಾಗಿ ಹೆಚ್ಚು ಜನರನ್ನು ರಿಟ್ರೆಂಚ್ ಮಾಡಬೇಕಾದ ಸ್ಥಿತಿ ಬಂತು. ಇವರಿಗೆ ಬೇರೆ ಕಡೆ ಆಲ್ಟರ್‌ನೇಟೀವ್ ಜಾಬ್ಸ್‌ನ್ನು ಹುಡುಕಬೇಕಾಗಿ ಬಂತು. ಆದಷ್ಟು ಹೆಚ್ಚು ರಿಟ್ರೆಂಚ್‌ಮೆಂಟು ಮಾಡದೆ ಇವರಿಗೆ ಅವಕಾಶ ಕೊಡಬೇಕು ಎನ್ನುವ ಬಗ್ಗೆ ಪ್ರಯತ್ನ ಮಾಡು ತ್ತಿದ್ದೇವೆ. ಇವರಿಗೆ ಹೆಚ್ಚು ಪ್ರಿಫರೆನ್ಸ್ ಕೊಡಬೇಕು ಎಂದು ನನ್ನ ಕಡೆಗೆ ಎನ್.ಜಿ.ಓ. ಅಸೋಸಿಯೇಷನ್ ಕಡೆಯವರೂ ಬಂದು ಮೆಮೊರ್ಯಾಂಡಂ ಕೊಟ್ಟಿದ್ದಾರೆ ಮತ್ತು ನಮ್ಮನ್ನು

ಬೀದಿಗೆ ಎಳೆಯಬೇಡಿ ಎಂದೂ ಕೇಳಿಕೊಂಡಿದ್ದಾರೆ. ನಾನು ಕೂಡ ಇವರ ಅಸೋಸಿಯೇಷನ್ ನವರಿಗೆ ನಮ್ಮ ಪರಿಸ್ಥಿತಿ ಏಗೆ ಇದೆ ಇದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ ಎಂದೂ ಅವರಿಗೆ ಹೇಳಿದ್ದೇನೆ. ಎನ್. ಜಿ. ಓ. ಅಸೋಸಿಯೇಷನ್‌ನವರು ನನ್ನ ಹತ್ತಿರ ಅನೇಕಸಲ ಬಂದಿದ್ದಾರೆ. ಅವರೊಡನೆ ಇವೆಲ್ಲಾ ವಿಚಾರಗಳನ್ನೂ ಕುರಿತು ಚರ್ಚೆ ಮಾಡಿದ್ದೇನೆ ಮತ್ತು ಎಷ್ಟು ಪ್ರಮಾಣದಲ್ಲಿ ಇದನ್ನು ಕಡಿಮೆ ಮಾಡಬಹುದು ಎನ್ನುವುದರ ಬಗೆಗೂ ಕೂಡ ಅವರೊಡನೆ ಮಾತನಾಡಿದ್ದೇನೆ. ಇದೇ ರೀತಿ ಶ್ರೀಮಾನ್ ಆರಕೇರಿಯವರೂ ಕೂಡ ನನ್ನ ಬಳಿಗೆ ಒಂದು ಡೆಪ್ಯುಟೇಷನ್ ಕರೆದುಕೊಂಡು ಬಂದು ಇದರ ವಿಚಾರವಾಗಿ ದೀರ್ಘವಾಗಿ ಪ್ರಸ್ತಾಪ ಮಾಡಿದರು ಮತ್ತು ಒಂದು ವಿವರವಾದ ಮೆಮೊರ್ಯಾಂಡಂನ್ನು ಕೂಡ ನನಗೆ ಕೊಟ್ಟಿದ್ದಾರೆ. ಇದನ್ನೂ ಪರಿಶೀಲನೆ ಮಾಡುತ್ತಿದ್ದೇನೆ ಎಂದು ಅವರಿಗೆ ಕೂಡ ಭರವಸೆ ಕೊಟ್ಟಿದ್ದೇನೆ. ಈಗ ಪ್ರಶ್ನೆ ಏನು ಬಂದಿರುತ್ತೆ ಎಂದರೆ ಈಗ ನಾವೇನು ಜನರನ್ನು ಹೊರಗೆ ಹಾಕಿದ್ದೇವೆ ಇವರೆಲ್ಲರಿಗೂ ಆಲ್ಟರ್‌ನೇಟೀವ್ ಹಾಬುಗಳನ್ನು ಹುಡುಕುವತನಕ ಪಿ.ಎಸ್. ಸಿ. ಅವರು ರೆಗ್ಯುಲರ್ ರಿಕ್ರೂಟ್‌ಮೆಂಟುಗಳನ್ನು ನಿಲ್ಲಿಸಬೇಕಾಗುತ್ತದೆ. ಅದರಂತೆ ಇನ್ನು ಒಂದು ವರ್ಷಕಾಲ ಆ ರೆಕ್ರೂಟ್‌ಮೆಂಟನ್ನೂ ಕೂಡ ನಿಲ್ಲಿಸುವುದಕ್ಕೆ ನಾವು ಪ್ರಯತ್ನ ಮಾಡಕ್ಕಿದ್ದೇವೆ. ಆದರೆ ಅತ್ತ ಪಿ.ಎಸ್.ಸಿ. ಅವರು ನೇಮಕ ಮಾಡುವುದು ಮತ್ತು ಇತ್ತಕಡೆ ಇವರನ್ನು ರೆಗ್ಯುಲರೈಜ್ ಮಾಡುವುದು ಈ ಎರಡೂ ಕೆಲಸಗಳನ್ನು ಒಂದೇಕಾಲಕ್ಕೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾವೀಗ ಹೊರಗೆ ಹಾಕಿರತಕ್ಕ ಜನರಲ್ಲಿ ಎಷ್ಟು ಜನರನ್ನು ಎಲ್ಲೆಲ್ಲಿ ಅಬ್ಸಾರ್ಬ್ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ನಾನು ಇನ್ನು ಮಾನ್ಯ ಸದಸ್ಯರುಗಳಿಗೆ ಕಟ್ಟ ಕಡೆಯದಾಗಿ ಇಷ್ಟನ್ನು ಹೇಳುತ್ತಿದ್ದೇನೆ, ಈ ರೋಕರ್ ಕ್ಯಾಂಡಿಡೇಟುಗಳ ವಿಚಾರದಲ್ಲಿ ಎಷ್ಟು ಅಭಿಮಾನ ಇವರೆಲ್ಲರಿಗೂ ಇದೆಯೋ ಅಷ್ಟೇ ಅಭಿಮಾನ ಅವರ ವಿಚಾರದಲ್ಲಿ ನನಗೂ ಮತ್ತು ನನ್ನ ಸಹೋದ್ಯೋಗಿಗಳಿಗೂ ಇದೆ. ಈ ಸಮಸ್ಯೆಯನ್ನು ನಾವು ತುಂಬಾ ಸಹಾನುಭೂತಿ ಮತ್ತು ಸಹನೆಗಳಿಂದ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಿದ್ದೇನೆ ಈ ಸಮಸ್ಯೆಯನ್ನು ಅದಷ್ಟೂ ಮುಂದಕ್ಕೆ ತಳ್ಳಿಕೊಂಡು ಹೋಗಬೇಕು ಎಂಬುದು ನನ್ನ ಉದ್ದೇಶವಲ್ಲ. ಆದಷ್ಟು ಬೇಗ ಇದನ್ನು ಇತ್ಯರ್ಥಮಾಡಬೇಕೆಂಬ ಇರಾದೆ ನಮಗೂ ಇದೆ ಆದರೆ ನಾವು ಮಾಡತಕ್ಕ ಕೆಲಸಗಳು ಕಾನೂನು ಬದ್ಧವಾಗಿರಬೇಕು, ಕ್ರಮಬದ್ಧವಾಗಿರಬೇಕು ಎಂಬ ದೃಷ್ಟಿಯಿಂದ ಪರಿಶೀಲನೆ ಮಾಡುತ್ತಿದ್ದೇವೆ. ಸಾಧ್ಯವಾದಮಟ್ಟಿಗೂ ಎಲ್ಲರಿಗೂ ಸಮಾಧಾನವಾಗುವಂಥ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಬಹುದು ಎಂಬ ಆಶೆಯನ್ನು ನಾನೂ ಕೂಡ ಇಟ್ಟುಕೊಂಡಿದ್ದೇನೆಂದು ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Miscellaneous Subjects to be taken up in the House

† ಶ್ರೀ ಪಾಟೀಲ್ ನಾಗರಾಜ್ (ಚಿಕ್ಕಪೇಟೆ).—ಸ್ವಾಮಿ, ಅಧ್ಯಕ್ಷರೇ ನಾನು 3-4 ಸಾರ್ತಿ ಎದ್ದೆದ್ದು ಕುಳಿತೆ. ನಾನು ತಮ್ಮ ಆಫೀಸಿಗೆ ನಾಲ್ಕೈದು ನೋಟೀಸುಗಳನ್ನು ಕಳುಹಿಸಿದ್ದೆ. ಆ ನೋಟಿಸುಗಳಲ್ಲಿ ಒಂದು ಆ ಹಡಗಲಿಗೆ ಸಂಬಂಧಪಟ್ಟದ್ದು. ಅದನ್ನು ನಾನು ರೂರ್ 163ಮೇರೆಗೆ ಕೊಟ್ಟಿದ್ದೆ. ಹಾಗೆ ನಾನು ಕೊಟ್ಟಿದ್ದ ಆ ನೋಟೀಸಿನ ಬಗ್ಗೆ ಈ ಸಭೆಯಲ್ಲಿ ಇನ್ನೂ ಏನೂ ಒಂದು ತೀರ್ಮಾನವಾಗದೆ ಇರುವಾಗ ಇದಕ್ಕೆ ಸಂಬಂಧಪಟ್ಟ ವಿದ್ಯಾ ಉಪಮಂತ್ರಿಗಳಾದ ಶ್ರೀ ಸೋಗಿ ಅವರು ಪತ್ರಿಕೆಗಳಲ್ಲಿ ಆ ಪತ್ರಿಕಾಕರ್ತರಿಗೆ ಉಂಟಾದ ಅನಾನುಕೂಲಗಳ ಬಗ್ಗೆ ವಿಷಾದವನ್ನು ವ್ಯಕ್ತಪಡಿಸತಕ್ಕ ಒಂದು ಹೇಳಿಕೆಯನ್ನು ಹೊರಡಿಸಿರುವುದಲ್ಲದೆ ಇವರೇ ಇಲ್ಲಿಂದ ಆ ಹಡಗಲಿ ತಾಲ್ಲೂಕಿನ ಬೋರ್ಡ್ ಥೇರ್ಮನ್ನರಿಗೆ ಒಂದು ತಂತಿಯನ್ನು ಕಳುಹಿಸಿ ನೀವು ಈ ರೀತಿ ಪತ್ರಿಕೆಗಳಲ್ಲಿ ಒಂದು ಹೇಳಿಕೆಯನ್ನು ಹೊರಡಿಸಿ ಎಂದು ತಿಳಿಸಿ, ಜೊತೆಗೆ ತಮ್ಮ ಒಂದು ಅನೀತಿಯುತವಾದ ಹೇಳಿಕೆಯನ್ನು ಬೇರೆ ಕೊಟ್ಟಿದ್ದಾರೆ. ಆ ಪತ್ರಿಕಾಕರ್ತರನ್ನು ಹಡಗಲಿಗೆ ಬಾಬೇಕೆಂದು ಆಹ್ವಾನಿಸಿದವರಾದರೂ ಯಾರು? ಈ ಸೋಗಿಯವರೇ. ಆದರೆ ಮೇಲ್ಮನೆಯಲ್ಲಿ ಇದೇ ವಿಚಾರಕ್ಕೆ ಸಂಬಂಧಪಟ್ಟ ಒಂದು ಮೋಷನ್ ಅಲ್ಲಿ ಚರ್ಚೆಗೆ ಬಂದಿದ್ದಾಗ ಅಲ್ಲಿ ಮಾನ್ಯ ಸಚಿವರು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಾನು ಇಲ್ಲಿ ನೋಟೀಸನ್ನು ಅದಕ್ಕೂ ಮೊದಲೇ ಕೊಟ್ಟಿದ್ದೆನು. ಆದರೆ ನನ್ನ ನೋಟೀಸಿಗೆ ಇಲ್ಲಿ ಉತ್ತರವನ್ನು ಕೊಡದೆ ಮೇಲ್ಮನೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯಪಾಲರಾದ ಶ್ರೀ ಧರ್ಮವೀರ ಅವರನ್ನು ಹಡಗಲಿಯವರೇ ಪಹಿಸಬೇಕೆಂದು ಇದ್ದಂಥ ಒಂದು ಸಮಾರಂಭದ ಅಧ್ಯಕ್ಷತೆಯನು ಶ್ರೀ ಸೋಗಿಯವರೇ ವಹಿಸಬೇಕೆಂದು ಇದ್ದಂಥ ಒಂದು ಸಂದರ್ಭವಲ್ಲ, ಇನ್‌ಫರ್ಮೇಷನ್ ಆಫೀಸರ ಮುಖಾಂತರ ಈ ಪತ್ರಿಕಾಕರ್ತರನ್ನು ಶ್ರೀ ಸೋಗಿ

(ಶ್ರೀ ಪಾಟಾಳ್ ನಾಗರಾಜ್)

ಯವರೇ ಕರೆಸಿ ಅವರಿಗೆ ಅಪಮಾನ ಮಾಡಿದ್ದಾರೆ. ಅವರನ್ನು ಅಷ್ಟು ಬೇಜವಾಬ್ದಾರಿಯಿಂದ ಕಾಣುವುದಕ್ಕೆ ಇವರಿಗೆ ಮನಸ್ಸಾದರೂ ಹೇಗೆ ಬಂತು ? ತಾವಾಗೇ ಬರೆದು ಅವರನ್ನು ಕರೆಸಿ ಅವರಿಗೆ ಒಂದು ಮರ್ಯಾದೆಯನ್ನು ಕೊಡುವುದು ಬೇಡವೇ ? ಶ್ರೀ ಸೋಗಿಯವರು ಆ ಪತ್ರಿಕಾಕರ್ತರಿಗೆ ಒದಗಿಸಿದ ಒಂದು ಢಕ್ಕೋ ನರ್ವೀಸಿನಲ್ಲಿ ಇಲ್ಲಿಂದ ಹೊರಟರೆ ಅವರಿಗೆ ಚಿತ್ರದುರ್ಗದಲ್ಲಿ ಊಟಕ್ಕೆ ವ್ಯವಸ್ಥೆಮಾಡಿದೆ ಎಂದು ಹೇಳಿದ್ದರು. ಅಲ್ಲೇನೂ ಮಾಡಿಯೇ ಇರಲಿಲ್ಲ. ಅಲ್ಲಿ ಅವರಿಗೆ ಒಂದು ತೊಟ್ಟು ನೀರೂ ಕೂಡ ಸಿಕ್ಕಲಿಲ್ಲ. ಅಲ್ಲಿಂದ ಅವರು ಹೊರಟು ರಾತ್ರಿಮೂರು ಗಂಟೆಗೆ ಹಡಗಲಯನ್ನು ತೇರಿದರು. ಅಲ್ಲಿಯೂ ಕೂಡ ಇವರಿಗೆ ಅನ್ನವೂ ಇಲ್ಲ; ನೀರೂ ಕೂಡ ಇಲ್ಲ. ಪತ್ರಿಕಾಕರ್ತರು ಅಲ್ಲಿಗೆ ಬಂದಿದ್ದಾರೆಂಬ ಸುದ್ದಿಯನ್ನು ಕೇಳಿದ ಮೇಲೂ ಶ್ರೀ ಸೋಗಿಯವರು ಯಾವುದೋ ಮನೆಯಲ್ಲಿ ಇನ್ಸ್‌ಪೀಟಾಟವಾಡುತ್ತಿದ್ದರು, ಎದ್ದು ಹೊರಗೆ ಬರಲೇ ಇಲ್ಲ. ಇವರು ಏಕೆ ಹೊರಗೆ ಬರಲಿಲ್ಲ? ಇವರು ಯಾವುದೋ ಅವತಾರದಲ್ಲಿದ್ದಿರಬೇಕು. ಅದಕ್ಕಾಗೇ ಇವರು ಆಗ ಹೊರಗೆ ಬರಲಿಲ್ಲ ಎಂದು ಕಾಣುತ್ತದೆ. ಪತ್ರಿಕಾಕರ್ತರಿಗೆ ಇಷ್ಟೊಂದು ಅಪಮಾನವೇ ? ಆ ಟಿ. ಬಿ. ಯಲ್ಲಿ ಆ ದಿವಸ ರಾಜ್ಯಪಾಲರಿಗೆ ವ್ಯವಸ್ಥೆಮಾಡಿದೆ ಎಂದು ಹೇಳಿರುವುದೆಲ್ಲಾ ಸುಳ್ಳು. ಅಲ್ಲಿ ಆ ರಾಜ್ಯಪಾಲರ ಕಾರ್ಯದರ್ಶಿಗಳಿಗೋ ಅಥವಾ ಉಪಕಾರ್ಯದರ್ಶಿಗಳಿಗೋ ರಿಜರ್ವ್ ಮಾಡಿರಬೇಕು. ಅದಕ್ಕೇ ಅಲ್ಲಿಂದ ಪತ್ರಿಕಾಕರ್ತರನ್ನು ಹೊರಕ್ಕೆ ತಳ್ಳಿಸಬೇಕೇ ? ನರ್ಕಾರದವರಿಗೆ ಎಲ್ಲ ರೀತಿಯಲ್ಲೂ ಪಬ್ಲಿಸಿಟಿ ಬೇಕು, ಪತ್ರಿಕೆಗಳಲ್ಲಿ ಇವರ ಉದ್ದವಾದ ಹೇಳಿಕೆಗಳು ಬರಬೇಕು, ಆದರೆ ಅವರಿಗೆ ಮರ್ಯಾದೆಬೇಡ ? ಅವರಿಗೆ ಊಟ ಬೇಡ ವಸತಿ ಬೇಡ ? ಇದು ಉಪಮಂತ್ರಿಗಳ ನತ್ಕಾರ. ಸಾಲದ್ದಕ್ಕೆ ವಿಷಾದವನ್ನು ಬೇರೆ ವ್ಯಕ್ತಪಡಿಸಿದ್ದಾರೆ. ನಾನು ರೂಲ್ 163 ಪ್ರಕಾರ ನೋಟೀಸನ್ನು ಕೊಟ್ಟಿದ್ದರೂ ಅದನ್ನು ಲೆಕ್ಕಿಸದೆ ಈ ಸಭೆಯನ್ನೂ ಲೆಕ್ಕಿಸದೆ ಇವರು ಹೇಗೆ ಹೊರಗೆ ಹೇಳಿಕೆಯನ್ನು ಕೊಟ್ಟರು ? ಈ ಸಭೆಯಲ್ಲಿ ಆ ವಿಷಯ ತೀರ್ಮಾನವಾಗುವುದಕ್ಕೆ ಮೊದಲೇ ಹೇಗೆ ಹೊರಗಡೆ ಈ ನನ್ನ ನೋಟೀಸಿನ ವಿಚಾರದಲ್ಲಿ ಇವರು ಹೇಳಿಕೆಯನ್ನು ಕೊಟ್ಟರು ! * * *

4-00 P.M.

(MR. DEPUTY SPEAKER in the Chair)

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಈ ದಿನದ ಕಾರ್ಯಕಲಾಪಗಳಲ್ಲಿ ಇಲ್ಲದೇ ಇರುವಂಥ ವಿಷಯಗಳೆಲ್ಲಾ ಬರುತ್ತಾ ಇದೆ. ಈ ರೀತಿ ಆಗುತ್ತಾ ಹೋದರೆ ನಮ್ಮ ಸ್ಥಾನಮಾನಗಳೇನು ಎನ್ನುವುದನ್ನು ಸ್ಪಷ್ಟಪಡಿಸಬೇಕು ಅಥವಾ ಈಗ ಮಾಡುವ ಭಾಷಣ ಯಾವ ಕಾರ್ಯಕಲಾಪದಲ್ಲಿ ಇದೆ ಎನ್ನುವುದನ್ನು ತಿಳಿಸಬೇಕು. ಇಲ್ಲದೇ ಹೋದರೆ ಈ ಸಭೆಯಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ.

MR. DEPUTY SPEAKER.—I agree with the hon. Member.

ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಸ್ವಾಮಿ, ನಾನು ಒಂದು ನೋಟೀಸ ಕೊಟ್ಟಿದ್ದೆ. ಆ ವಿಷಯ ಏನಾಯಿತು ?

ಉಪಾಧ್ಯಕ್ಷರು.—ನಿಮ್ಮ ನೋಟೀಸ್ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಅಜೆಂಡಾದಲ್ಲಿರುವ ಸಬ್ಜಕ್ಟನ್ನು ಯಾವಾಗ ತೆಗೆದುಕೊಳ್ಳುತ್ತೀವೆ ಎನ್ನುವುದನ್ನು ತಿಳಿಸಿದರೆ ಅವಾಗ ಬರುತ್ತೀವೆ. ಅಷ್ಟು ಹೊತ್ತಿನವರೆಗೆ ಹೊರಗಡೆ ಇರುತ್ತೀವೆ.

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ, ತುಮಕೂರು ಟೌನಿನ ಪೌಟರ್ ನಪ್ಲೈ ಬಗ್ಗೆ ½ಗಂಟೆ ಡಿಸ್ಕಷನ್‌ಗೆ ನೋಟೀಸ್ ಕಳುಹಿಸಿದ್ದೆ. ಅದು 3-4 ಸಾರಿ ಅಜೆಂಡಾದಲ್ಲಿ ಬಂದಿತ್ತು, ಆದರೆ ಡಿಸ್ಕಷನ್ ದಿವಸವೇ ಸಭೆಯ ಕಾರ್ಯಕಲಾಪಗಳು ರಾತ್ರಿ 8-8½ ಗಂಟೆಯಾಗಿ ಬಹಳ ವೇಳೆ ಆದುದರಿಂದ ಅದು ತಪ್ಪಿಹೋಯಿತು. ಸೋಮವಾರ ಒಂದು ದಿವಸವೇ ಈ ಸಭೆ ನಡೆಯುವುದರಿಂದ ಆ ದಿನ ಬೇರೆ ಸಬ್ಜಕ್ಟ್‌ಗಳೂ ಕೂಡ ಇರುವುದರಿಂದ ಈ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ? ನಾನು ಯಾವಾಗ ಕೇಳಿದರೂ ನಾಳೆ ಬರುತ್ತದೆ ಎಂದು ಹೇಳಿದರೆ ನಾವು ತಮ್ಮ ಬಗ್ಗೆ ಏನು ತಿಳಿದುಕೊಳ್ಳಬೇಕು.

ಉಪಾಧ್ಯಕ್ಷರು.—ಸೋಮವಾರ ನೋಡೋಣ.

* * * Matter not recorded as ordered by the Chair.

ಶ್ರೀ ಸದಾಶಿವಪ್ಪ ಪಾಟೀರ್ (ದೇವದುರ್ಗ).—ಸ್ವಾಮಿ, ನಾನು ಒಂದು ಕಾರ್ ಅಜೆನ್‌ಷನ್ ಮೋಷನ್ ಕಳುಹಿಸಿದ್ದೆ. ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ 1 ಲಕ್ಷ ಎಕರೆಗೆ ನೀವು ಕೊಟ್ಟಂಥ ಹೈಬ್ರಿಡ್ ಸೀಡ್ಸ್ ಬತ್ತನೆ ಆಗಿದೆ. ಈಗ ಅದಕ್ಕೆಲ್ಲಾ ಸ್ಪ್ರೇ ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಆ ಕ್ರಾಪ್ ಎಲ್ಲಾ ಫೈಲ್ಯೂರ್ ಆಗುತ್ತದೆ. ಅದುದರಿಂದ ದಯವಿಟ್ಟು ನಾನು ಕೊಟ್ಟಿರತಕ್ಕ ಕಾರ್ ಅಜೆನ್‌ಷನ್ ನೋಟಿಸನ್ನು ಸೋಮವಾರ ತೆಗೆದುಕೊಂಡು ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ನೋಡೋಣ.

ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಸ್ವಾಮಿ, ಕರ್ನಾಟಕ ಯೂನಿವರ್ಸಿಟಿಗೆ ಶ್ರೀಮಾನ್ ಪಾಟೀರ್ ಪುಟ್ಟಪ್ಪನವರನ್ನು ನಾಮಕರಣ ಮಾಡಿದ ಬಗ್ಗೆ ನನ್ನ ಒಂದು ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದ್ದಾರೆ. ಅದು ಸೋಮವಾರ ಬರುವುದಕ್ಕೆ ಸಾಧ್ಯವಾಗುತ್ತದೆಯೇ?

ಉಪಾಧ್ಯಕ್ಷರು.—ಹೆಲ್ಡ್ ಓವರ್ ಪ್ರಶ್ನೆಯನ್ನು ಸೋಮವಾರ ತೆಗೆದುಕೊಳ್ಳೋಣ.

Papers laid on the Table

Sri M. RAJASEKHARA MURTHY (Minister for Industries, Information and Publicity).—Sir, I beg to lay on the Table of the House :

"A copy of the Government of India Scheme for financing craftsmen and qualified entrepreneurs in pursuance of his promise given on 21-1-1970 in reply to Starred question No. 42 by Sri N. A. Channe Gowda during Seventh Session."

Mr. DEPUTY SPEAKAR.—The Paper is laid.

Report of the Committee on Government Assurances

Sri A. R. PANCHAGAVI.—Sir, I beg to present :

"The Fourth Report of the Committee on Government Assurances."

Mr. DEPUTY SPEAKER.—Report is presented.

Report of the Mysore Public Service Commission

Sri H. SIDDAVEERAPPA.—Sir, I beg to move :

"That the Report of the Mysore public Service Commission for the year 1966-67 laid on the Table of the House on 12th October, 1970 be taken into consideration."

Mr. DEPUTY SPEAKER.—Motion moved :

"That the Report of the Mysore Public Service Commission for the year 1966-67 laid on the Table of the House on 12th October, 1970 be taken into consideraion."

Sri H. SIDDAVEERAPPA (Harihar).—Sir, I do not want to take much time because I would like to give opportunity to other friends who would like to participate in discussion on this important subject.